# ಜೆಎಸ್ಎಸ್ ಫಿಜಿಯೋಥೆರಪಿ ಕಾಲೇಜು, ಮೈಸೂರು

## ದಿ 29–05–2018 ರಂದು ನಡೆದ ಬೋಧಕೇತರ ವರ್ಗದವರ ಸಭೆಯ ನಡಾವಳಿಗಳು

ದಿ. 29–05–2018 ರಂದು ಬೋಧಕೇತರ ವರ್ಗದವರಿಗಾಗಿ ಸಭೆಯನ್ನು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು. ವಿಜಯ್ ಸಾಮುಯಲ್ ರಾಜ್, ಉಪನ್ಯಾಸಕರು ಇವರು ಎಲ್ಲರನ್ನೂ ಸ್ವಾಗತಿಸಿದರು.

1. ಈ ಸಭೆಯಲ್ಲಿ ಪ್ರತಿ ತಿಂಗಳ 4ನೇ ಬುಧವಾರದಂದು ಮಧ್ಯಾಹ್ನ 2.30 ಕ್ಕೆ ಸಭೆ ಕರೆಯಬೇಕೆಂದು ತೀರ್ಮಾನಿಸಲಾಯಿತು.
2. ರಾಜೀವ್ ಗಾಂಧಿ ವಿಶ್ವವಿದ್ಯಾನಿಯಲಕ್ಕೆ ಸಂಬಂಧಿಸಿದ, ಜೆಎಸ್ಎಸ್ ಮಹಾವಿದ್ಯಾಪೀಠಕ್ಕೆ ಸಂಬಂದಿಸಿದ ಮತ್ತು ಜೆಎಸ್ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಗೆ ಸಂಬಂಧಿಸಿದ ಕೆಲಸ ಕಾರ್ಯಗಳ ಬಗ್ಗೆ ರಾಜೀವ್ ಗಾಂಧಿ ವಿಶ್ವವಿದ್ಯಾನಿಯಲದ ಕ್ಯಾಲೆಂಡರ್ ಜೊತೆ ತಾಳೆ ನೋಡಿ ಕಾಲೇಜು ಕ್ಯಾಲೆಂಡರ್ ಸಿದ್ದಪಡಿಸಲು ಪ್ರಾಂಶುಪಾಲರು ತಿಳಿಸಿದರು.
3. ಗ್ರಂಥಾಲಯದ ಕೆಲಸ ಕಾರ್ಯಗಳ ಕ್ಯಾಲೆಂಡರ್ ಸಿದ್ದಪಡಿಸಲು ತಿಳಿಸಿದರು.
4. ಸ್ವಚ್ಚತಾ ಕೆಲಸಗಾರರ ವೇಳಾಪಟ್ಟಿ ಸಿದ್ದಪಡಿಸಲು ತಿಳಿಸಲಾಯಿತು
5. ಸ್ವಚ್ಚತಾ ಕೆಲಸಗಾರರಾದ ಶ್ರೀಮತಿ ಕಮಲಮ್ಮನವರು ಕಿಟಕಿಗಳ ಪರದೆಗಳನ್ನು ಸ್ವಚ್ಚ ಮಾಡಿದಾಗ ಅವುಗಳನ್ನು ಒಣಗಿಸಲು ಸ್ಥಳವಿಲ್ಲವೆಂದು ತಿಳಿಸಿದರು. ಇದಕ್ಕಾಗಿ ಪಿಎಂಆರ್ ಕೊಠಡಿಯನ್ನು ಉಪಯೋಗಿಸಿಕೊಳ್ಳಿ ಎಂದು ಪ್ರಾಂಶುಪಾಲರು ತಿಳಿಸಿದರು.
6. ಸ್ವಚ್ಚತಾ ಕೆಲಸಗಾರರಾದ ಶ್ರೀಮತಿ ಕಮಲಮ್ಮ ಮತ್ತು ಸಾವಿತ್ರಿಯವರನ್ನು ಪ್ರತಿದಿನ ಮಧ್ಯಾಹ್ನ 3.30ಕ್ಕೆ ವಿದ್ಯಾಪೀಠಕ್ಕೆ ಲೆಟರ್‌ಗಳನ್ನು ತೆಗೆದುಕೊಂಡು ಹೋಗಲು ಸೂಚಿಸಲಾಯಿತು. ಮತ್ತು ಅವಶ್ಯಕತೆ ಇರುವ ಸಂದರ್ಭಗಳಲ್ಲಿಯೂ ಸಹ ಹೋಗಿಬರಲು ಸೂಚಿಸಲಾಯಿತು.
7. ಜುಲೈನಲ್ಲಿ ನಡೆಯಲಿರುವ ಪದವಿ ಪ್ರಧಾನ ಸಮಾರಂಭದಲ್ಲಿ ಬೋಧಕೇತರ ವರ್ಗದವರೆಲ್ಲರೂ ಕೆಲಸ ನಿರ್ವಹಿಸಲು ಸೂಚಿಸಲಾಯಿತು.
8. ಪದವಿ ಪ್ರಧಾನ ಸಮಾರಂಭಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳು ಮತ್ತು ನಿರ್ವಹಣೆಯ ಬಗ್ಗೆ ಬೋಧಕ ವರ್ಗದವರಿಂದ ಸಲಹೆ ಸೂಚನೆಗಳನ್ನು ಪಡೆದುಕೊಳ್ಳಲು ಪ್ರಾಂಶುಪಾಲರು ತಿಳಿಸಿದರು.
9. ಕಾಲೇಜಿಗೆ ಸಂಬಂಧಿಸಿದ ಇ ಮೇಲ್ ಚೆಕ್ ಮಾಡಲು ದಾಕ್ಷಾಯಿಣಿಯವರಿಗೆ ತಿಳಿಸಲಾಯಿತು ಅದೇ ದಿನ ಮೇಲ್‌ಗಳಿಗೆ ಉತ್ತರಿಸಲು ತಿಳಿಸಲಾಯಿತು.
10. ಕಂಪ್ಯೂಟರ್ ಮತ್ತು ಲ್ಯಾಬ್‌ಗಳ ನಿರ್ವಹಣೆಯ ಬಗ್ಗೆ ತಿಳಿಸಲಾಯಿತು.
11. ಶಾರ್ಟ್ ಸರ್ಕ್ಯೂಟ್ ನಿಂದ ಗ್ರಂಥಾಲಯದ 2 ಸಿಸಿ ಕ್ಯಾಮೆರಾಗಳು ಹಾಳಾಗಿದ್ದು ಇದರ ಬಗ್ಗೆ ಇಲೆಕ್ಟ್ರೀಷಿಯನ್ ಗಂಗಾಧರ್ ರವರಿಂದ ಮಾಹಿತಿ ಪಡೆಯಲು ತಿಳಿಸಿರುತ್ತಾರೆ.
12. ಲೈಟ್, ಫ್ಯಾನ್, ಶೌಚಾಲಯಗಳಿಗೆ ಸಂಬಂಧಿಸಿದಂತೆ ಏನಾದೂ ರಿಪೇರಿ ಅಥವಾ ತೊಂದರೆಗಳಿದ್ದಲ್ಲಿ ಸಂಬಂಧಪಟ್ಟವರನ್ನು ಕರೆದು ಸರಿಪಡಿಸಲು ತಿಳಿಸಲಾಯಿತು.

**ಸಭೆಯಲ್ಲಿ ಹಾಜರಿದ್ದವರು**

| | | |
|---|---|---|
| 1. | ಡಾ, ಕವಿತಾರಾಜ | ಪ್ರಾಂಶುಪಾಲರು |
| 2. | ವಿಜಯ್ ಸಾಮುಯಲ್ ರಾಜ್ | ಉಪನ್ಯಾಸಕರು |
| 3. | ಸುವರ್ಣ ಎನ್ | ಲೈಬ್ರರಿಯನ್ |
| 4. | ಪ್ರಶಾಂತ್ ಕೆ ಎಸ್ | ದ್ವಿತೀಯ ದರ್ಜೆ ಸಹಾಯಕರು |
| 5. | ದಾಕ್ಷಾಯಿಣಿ | ದ್ವಿತೀಯ ದರ್ಜೆ ಸಹಾಯಕರು |
| 6. | ನಿರಂಜನ್ ಪ್ರಸಾದ್ | ಸಹಾಯಕರು |
| 7. | ರೇಣುಕಾ ಎಂ | ಸಹಾಯಕರು |
| 8. | ಉಮಾ ಶಂಕರ್ | ಸಹಾಯಕರು |
| 9. | ಶಂಕರ್ ಎಚ್ ಎನ್ | ಸಹಾಯಕರು |
| 10. | ಶ್ರೀಮತಿ ಸಾವಿತ್ರಿ | ಆಯಾ |
| 11. | ಶ್ರೀಮತಿ ಕಮಲಮ್ಮ | ಆಯಾ |
| 12. | ಶ್ರೀಮತಿ ರಾಜಮಣಿ | ಆಯಾ |
| 13. | ಶ್ರೀಮತಿ ಪಾಪಮ್ಮ | ಆಯಾ |

ಪ್ರಾಂಶುಪಾಲರು